ದಿಃ 09.01.2024
ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು : ಆರೋಪಿ ಪರ ಶ್ರೀಮತಿ ಎ ಎಸ್ ಕೆ ಮಾನ್ಯ ವಕೀಲರಿಂದ :

ನಾನು 10 ನೇ ತರಗತಿ ತನಕ ವ್ಯಾಸಂಗ ಮಾಡಿದ್ದೇನೆ. ನಾನು ಹಾಗೂ ನನ್ನ ಗಂಡ ಬಟ್ಟೆ ಅಂಗಡಿಯನ್ನು ಹೊಂದಿರುತ್ತೇವೆ. ಅಂಗಡಿಯನ್ನು ನಾನು ನೋಡಿಕೊಳ್ಳುತ್ತೇನೆ . ನನಗೂ ಕೂಡ ಈ ಅಂಗಡಿ ಇಂದ ಆದಾಯ ಇರುತ್ತದೆ . ದಿನನಿತ್ಯ ಆದಾಯಬರುತ್ತದೆ . ನನ್ನ ಆದಾಯ ದ ಬಗ್ಗೆ ನಾನು ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ . ನಾನು ಆದಾಯತೆರಿಗೆದಾರಳಾಗಿರುತ್ತೇನೆ .

. ಜಯನಗರ 4 ನೇ ಹಂತದಲ್ಲಿ ಅಂಗಡಿ ಹೊಂದಿರುತ್ತೇನೆ ಅದು ಬಾಡಿಗೆ ಅಂಗಡಿಯಾಗಿರುತ್ತದೆ . ಸುಮಾರು 3 ಜನ ನನ್ನ ಕೈ ಕೆಳಗೆ ಕೆಲಸ ಮಾಡುತ್ತಾರೆ . ಈ ವೃತ್ತಿ ಇಂದ ನನಗೆ ರೂ 15 ಲಕ್ಷ ವಾರ್ಷಿಕ ಆದಾಯವಿದೆ . ಈ ವೃತ್ತಿ ಇಂದ ಬರುವ ವರಮಾನ ಹೊರತುಪಡಿಸಿ ನನಗೆ 2019 ನೇ ಸಾಲಿನವರೆಗೂ ಬಾಡಿಗೆ ಹಣದ ವರಮಾನ ಕೂಡ ಇದ್ದಿರುತ್ತದೆ ಆ ಬಳಿಕ ಆ ಮನೆಯನ್ನು ಮಾರಾಟ ಮಾಡಿರುತ್ತೇನೆ . ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ .

ಈ ಪ್ರಕರಣ ಹೊರತುಪಡಿಸಿ ನನ್ನ ಗಂಡ ವೆಂಕಟರಾಮರೆಡ್ಡಿ ಹಾಗೂ ನನ್ನ ನಾದಿನಿಯಾದ ಪಾರ್ವತಿ ಅವರು ಆರೋಪಿ ವಿರುದ್ಧ 2 ಪ್ರಕರಣ ಪ್ರತ್ಯೇಕವಾಗಿ ಹೂಡಿರುತ್ತಾರೆ . ಈ ಪ್ರಕರಣಗಳು

This is a True Copy of the Court Records Online. Authenticated @ districts.ecourtsindia.com/cnr/KABC030919902021/truecopy/order-2.pdf
www.ecourtsindia.com

ಕೂಡ ಒಟ್ಟು 5 ಚೆಕ್ಕುಗಳಿಗೆ ಸಂಬಂದಪಟ್ಟಿರುತ್ತದೆ . ನನ್ನ ನಾದಿನಿ ಜಯದೇವ ಆಸ್ಪತ್ರೆಯಲ್ಲಿ ಸ್ಟಾಫ ನರ್ಸ ಆಗಿ ಕೆಲಸ ಮಾಡುತ್ತಾರೆ . ನನ್ನ ಗಂಡ ನನ್ನೊಡನೆ ನನ್ನ ಅಂಗಡಿಯನ್ನು ನೋಡಿಕೊಳ್ಳುತ್ತಾರೆ . .

ವರ್ತೂರಿನಲ್ಲಿ ವಾಸವಿರುವ ದಿವಂಗತ ರತ್ನಾಕರ ರೆಡ್ಡಿ ಅವರ ಹೆಂಡತಿ ಶೈಲಜ ಅವರ ಪರಿಚಯ ನನಗೆ ಇಲ್ಲ . ರತ್ನಾಕರ ಅವರನ್ನು ನಾನು ಎಂದು ಬೇಟಿ ಮಾಡಿರುವುದಿಲ್ಲ . ಅವರು ಬದುಕಿರುತ್ತಾರೋ ಮೃತ ಪಟ್ಟಿರುತ್ತಾರೋ ನನಗೆ ಗೊತ್ತಿಲ್ಲ .

ಶೈಲಜ ಅವರು ನನ್ನ ಗಂಡ ಮತ್ತುಆರೋಪಿಯ ವಿರುದ್ಧ ವರ್ತೂರು ಪೋಲೀಸ ಠಾಣೆಯಲ್ಲಿ ದೂರು ಸಲ್ಲಿಸಿರುತ್ತಾರೆಂದರೆ ಸರಿ ದಿ ಃ 14.02.2007 ರಂದು ಶೈಲಜ ಅವರು ತಮಗೆ ಸಂಬಂದಪಟ್ಟ ವರ್ತೂರಿನಲ್ಲಿರುವ ಸರ್ವೇ ಸಂಖ್ಯೆ 201/1 ಅದರ ವಿಸ್ತಿರ್ಣ 3 ಎಕರೆ 3 ಗುಂಟೆ ಜಮೀನಿಗೆ ಸಂಬಂದಪಟ್ಟಂತೆ ನನ್ನ ಗಂಡನ ಹೆಸರಿಗೆ ಮೊಖ್ತರನಾಮೆ ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿಯು ಆರೋಪಿ ನನ್ನ ಗಂಡನ ಹೆಸರಿಗೆ ಬರೆದುಕೊಟ್ಟಿರುತ್ತಾರೆಂದು ಹೇಳುತ್ತಾರೆ . ಸದರಿ ಮೊಖ್ತರನಾಮೆ ಆಧಾರದ ಮೇರೆಗೆ ದಿ ಃ 08.6.2014 ರಂದು ನನ್ನ ಗಂಡ ಆರೋಪಿಗೆ ನಿವೇಶನ ಕೂಡ ಮಾರಾಟ ಮಾಡಿರುತಾರೆಂದರೆ

This is a True Copy of the Court Records Online. Authenticated @ districts.ecourtsindia.com/cnr/KABC030919902021/truecopy/order-2.pdf

ಸರಿ . ಸದರಿ ನಿವೇಶನದಲ್ಲಿ ಮನೆ ಇರುತ್ತದೆಂದರೆ ಸರಿ . ಆರೋಪಿಯು ನನ್ನ ಗಂಡನ ಬಾಲ್ಯ ಸ್ನೇಹಿತ .

ಆರೀತಿ 2012 ನೇ ಸಾಲಿನಲ್ಲಿ ನನ್ನ ಗಂಡ ಆರೋಪಿಯ ಬಳಿ ಯಾರಿಗಾದರೂ ಬಡ್ಡಿಗೆ ಹಣ ಬೇಕಾದರೆ ಅವರು ಶೆಕಡ 4 ಪರ್ಸೆಂಟ ಮಾಸಿಕ ಬಡ್ಡಿ ಒಡನೆ ಸಾಲ ಕೊಡುವುದಾಗಿ ನನ್ನ ಗಂಡ ಆರೋಪಿಯ ಬಳಿ ವಿಚಾರಿಸಿರುತ್ತೇನೆಂದರೆ ಸರಿಯಲ್ಲ. ಆಗ ಆರೋಪಿಯನ್ನು ವಿಚಾರಿಸಿದಾಗ ರತ್ನಾಕರ ರೆಡ್ಡಿ ಅವರು ಶೇಕಡ 3 ಪರ್ಸೆಂಟ ಮಾಸಿಕ ಬಡ್ಡಿ ಕೊಡುತ್ತಾರೆ ಇದಕ್ಕೆ ಒಪ್ಪುವುದಾದರೆ ಸದರಿ ರತ್ನಾಕರ ರೆಡ್ಡಿ ಅವರುಸಾಲ ಪಡೆದುಕೊಳ್ಳುವುದಾಗಿ ಹೇಳಿರುತ್ತಾರೆಂದರೆ ಸರಿಯಲ್ಲ . ಆ ಪ್ರಕಾರ ನನ್ನ ಗಂಡ ರತ್ನಾಕರ ರೆಡ್ಡಿ ಅವರಿಗೆ ರೂ 10 ಲಕ್ಷ ಸಾಲವನ್ನು ಆರೋಪಿಯ ಮೂಲಕ ನೀಡಿ ಬಡ್ಡಿ ಯಂತೆ ರೂ 30 ಸಾವಿರ ಮಾಸಿಕವಾಗಿ ಪಡೆದುಕೊಳ್ಳುತ್ತಿದ್ದೆಂದರೆ ಸರಿಯಲ್ಲ . ಸದರಿ ರತ್ನಾಕರ ರೆಡ್ಡಿ ಅವರು ಬಡ್ಡಿ ಪಾವತಿಸುತ್ತಿದ್ದ ಕಾರಣ ಆರೋಪಿಯ ಗಮನಕ್ಕೆ ಬಾರದೆ ಇನ್ನೂ ರೂ 10 ಲಕ್ಷ 3 ಪರ್ಸೆಂಟ ಮಾಸಿಕ ಬಡ್ಡಿ ಯಂತೆ ನನ್ನ ಗಂಡ ರತ್ನಾಕರ ರೆಡ್ಡಿ ಅವರಿಗೆ ಕೊಟ್ಟಿರುತ್ತಾರೆಂದರೆ ಸರಿಯಲ್ಲ . ನಾವು ಜಯನಗರದಲ್ಲಿ ವಾಸ ವಿರುವ ಕಾರಣ ಆರೋಪಿ ವರ್ತೂರಿನಲ್ಲಿ ವಾಸ ಇರುವ ಕಾರಣ ಆರೋಪಿ ಸ್ವತಃ ರತ್ನಾಕರ ಅವರಿಂದ ರೂ 60 ಸಾವಿರ ಮಾಸಿಕ ಬಡ್ಡಿಯಂತೆ ಪಡೆದುಕೊಂಡು ನಮಗೆ

This is a True Copy of the Court Records Online. Authenticated @ districts.ecourtsindia.com/cnr/KABC030919902021/truecopy/order-2.pdf

ಕೊಡುತ್ತಿದ್ದರೆಂದರೆ ಸರಿಯಲ್ಲ . 2013 ನೆಯ 7 ನೇ ತಿಂಗಳಲ್ಲಿ ನನ್ನ ಗಂಡನಿಗೆ 5 ಲಕ್ಷದ ಅವಶ್ಯಕತೆ ಇದ್ದ ಕಾರಣ ಆರೊಪಿಯ ಮೂಲಕ ನನ್ನ ಗಂಡ ರತ್ನಾಕರ ರೆಡ್ಡಿ ಅವರಿಗೆ ನೀಡಿದ ರೂ 20 ಲಕ್ಷದ ಪೈಕಿ 5 ಲಕ್ಷ ಕೊಡಿಸುವಂತೆ ಕೋರಿರುತ್ತೇನೆಂದರೆ ಸರಿಯಲ್ಲ . ಆಗ ರತ್ನಾಕರ ರೆಡ್ಡಿ ಅವರು ನನ್ನ ಗಂಡನ ಕೋರಿಕೆಯನ್ನು ಸ್ಪಂದಿಸದ ಕಾರಣ ನನ್ನ ಗಂಡ ಆರೋಪಿಯ ಬಳಿಯೆ ರೂ 5 ಲಕ್ಷ ಕೊಡುವಂತೆ ಕೋರಿರುತ್ತಾರೆ ಹಾಗೂ ಸದರಿ 5 ಲಕ್ಷ ಹಣವನ್ನು ರತ್ನಾಕರ ರೆಡ್ಡಿ ಅವರಿಗೆ ಕೊಟ್ಟ 20 ಲಕ್ಷದಲ್ಲಿ ಸರಿಪಡಿಸಿಕೊಳ್ಳ ಬೇಕೆಂದು ಕೋರಿರುತ್ತೇನೆಂದರೆ ಸರಿಯಲ್ಲ . ಆಗ ಆರೋಪಿಯು ನನ್ನ ಗಂಡನ ಕೋರಿಕೆಯನ್ನು ಸ್ಪಂದಿಸಿ ರೂ 5 ಲಕ್ಷ ಹಣವನ್ನು ನನ್ನ ಖಾತೆಗೆ ವರ್ಗಾವಣೆ ಮಾಡಿರುತ್ತಾರೆಂದರೆ ಸರಿಯಲ್ಲ . ರತ್ನಾಕರ ರೆಡ್ಡಿ ಅವರು ಬಡ್ಡಿಯನ್ನು ಸರಿಯಾಗಿ ಪಾವತಿಸದ ಕಾರಣ ನಮ್ಮ ನಡುವೆ ಮನಃಸ್ತಾಪ ಉಂಟಾಗಿರುತ್ತದೆ ಹಾಗಾಗಿ ಅವರು ಬಡ್ಡಿಯನ್ನು ಪಾವತಿಸುವುದು ತಪ್ಪಿಸಿರುತ್ತಾರೆಂದರೆ ಸರಿಯಲ್ಲ . ಪಡೆದುಕೊಂಡ 20 ಲಕ್ಷವನ್ನು ಮರುಪಾವತಿಮಾಡಲು ಆಗದಿದ್ದ ಕಾರಣ ಮೇಲೆ ಹೇಳಿದ ದಿ ಃ 14.02.2007 ಮೊಖ್ತರನಾಮೆ ನನ್ನ ಗಂಡನ ಹೆಸರಿಗೆ ಬರೆದುಕೊಡಲಾಗಿದೆಂದರೆ ಸರಿಯಲ್ಲ .

ರತ್ನಾಕರ ರೆಡ್ಡಿ ಅವರು ಮೃತಪಟ್ಟ ನಂತರ ಅವರಿಗೆ ನೀಡಿದ ರೂ 20 ಲಕ್ಷವನ್ನು ಮರುಪಾವತಿಸುವಂತೆ ನಾವು ಆರೋಪಿ ಬಳಿ

This is a True Copy of the Court Records Online. Authenticated @ districts.ecourtsindia.com/cnr/KABC030919902021/truecopy/order-2.pdf

ಒತ್ತಾಯ ಮಾಡಿರುತ್ತೇನೆಂದರೆ ಸರಿಯಲ್ಲ . ಆರೋಪಿಯ ಹಿರಿಯ ಮಗಳ ಮದುವೆ ಸಂದರ್ಬದಲ್ಲಿ ಹಣ ಮರುಪಾವತಿಸುವಂತೆ ನಾನು , ನನ್ನ ಗಂಡ ಹಾಗೂ ಸಹೋದರಿ ಹೋಗಿ ಗಲಾಟೆ ಮಾಡಿರುತ್ತೇವೆಂದರೆ ಸಾಕ್ಷಿಯು ಹೋಗಿರುತ್ತೇವೆ ಆದರೆ ಗಲಾಟೆ ಮಾಡಿರುವುದಿಲ್ಲವೆಂದು ಹೇಳುತ್ತಾರೆ ಈ ಬಗ್ಗೆ ಆರೋಪಿಯು ದಿ ಃ 29.02.2020 ರಂದು ವರ್ತೂರು ಪೋಲೀಸ ಠಾಣೆಯಲ್ಲಿ ದೂರು ಸಲ್ಲಿಸಿರುತ್ತಾರೆಂದರೆ ಸರಿ . ತದನಂತರ ನಾವು ಕೂಡ ಒಂದು ದೂರು ಸಲ್ಲಿಸಿರುತ್ತೇವೆಂದರೆ ಸರಿ . ಆರೋಪಿಯು ಪೋಲೀಸ ಠಾಣೆಯಲ್ಲಿ ತನ್ನ ಹೇಳಿಕೆಯನ್ನು ಕೊಡುವಾಗ ತಾನು ಯಾರಿಂದ ಸಾಲ ಪಡೆದುಕೊಂಡಿರುವುದಿಲ್ಲ ರತ್ನಾಕರ ರೆಡ್ಡಿಗೆ ಸಾಲ ಪಡೆದಿರುವುದಾಗಿ ಹೇಳುತ್ತಾರೆ . ಆರೋಪಿಯು ನನ್ನ ಗಂಡನ ಹೆಸರಿಗೆ ಅವರು ಖರೀದಿಸಿದ ನಿವೇಶನದ ಕೆಲವು ಅಂಶದ ಅಳತೆಯನ್ನು ಒಪ್ಪಂದದ ಕರಾರು ಪತ್ರದ ಮೂಲಕ ನನ್ನ ಗಂಡನಿಗೆ ಬರೆದುಕೊಟ್ಟಿರುತ್ತಾರೆಂದರೆ ಸರಿ . ಆರೋಪಿಯು ನಮಗೆ ಯಾವುದೇಹಣಕೊಡುವ ಬಾಧ್ಯತೆ ಇರುವುದಿಲ್ಲ ಆದರೆ ನಾವು ಕೊಡುತ್ತಿದ್ದ ಕಿರುಕುಳಕ್ಕೆ ಸಹಿಸದೆ ಮೇಲೆ ಹೇಳಿದ ಒಪ್ಪಂದದ ಕರಾರು ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ . ನಾನು ನೀಡಿದ ತಿಳುವಳಿಕೆ ಪತ್ರಕ್ಕೆ ಆರೋಪಿಯು ಪ್ರತ್ಯುತ್ತರ ನೀಡಿರುತ್ತಾರೆಂದರೆ ಸರಿ . ಪ್ರತ್ಯುತ್ತರವನ್ನು ಸಾಕ್ಷಿ ಒಪ್ಪಿದ ಕಾರಣ ಅದನ್ನು ನಿಡಿ-1 ಎಂದು

This is a True Copy of the Court Records Online. Authenticated @ districts.ecourtsindia.com/cnr/KABC030919902021/truecopy/order-2.pdf

www.ecourtsindia.com

ಗುರುತಿಸಲಾಯಿತು . ನಮ್ಮ ಮತ್ತು ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಆದರೆ ರತ್ನಾಕರ ರೆಡ್ಡಿರವರಿಗೆ ಸಾಲವನ್ನು ಕೊಟ್ಟ ಕಾರಣ ಅವರು ಮೃತ ಪಟ್ಟ ಕಾರಣ ಆರೋಪಿ ಇಂದ ಹೇಗಾಗಿದರೂ ಹಣ ಸೂಲಿ ಮಾಡಕೊಳ್ಳಬಹುದೆಂಬ ದುರುದ್ದೇಶದಿಂದ ಈ ಸುಳ್ಳು ಪಿರ್ಯಾದಿ ಹೂಡಿರುತ್ತೇನೆಂದರೆ ಸರಿಯಲ್ಲ . ಸ್ವತಃ ನನ್ನ ಗಂಡ ಆರೋಪಿಯ ಮೂಲಕ ರತ್ನಾಕರ ರೆಡ್ಡಿ ಅವರನ್ನು ಸಂಪರ್ಕಿಸಿ ಬಡ್ಡಿಯ ಆಸೆ ಮೇರೆಗೆ ರೂ 20 ಲಕ್ಷ ಹಣವನ್ನು ಕೊಟ್ಟು ಕಳೆದುಕೊಂಡಿರುತ್ತೇನೆಂದರೆ ಸರಿಯಲ್ಲ .

2001 ರ ಪೂರ್ವದಲ್ಲಿ ಆರೋಪಿಯು ಕೆ ಜಿ ಎಫ್ ನಲ್ಲಿ ವಾಸವಿದ್ದರು . ಆರೋಪಿಯು ಕೆ ಜಿ ಎಫ್ ನ ಗೋಲ್ಡ ಮೈನ್ಸನಲ್ಲಿ ಕೆಲಸ ಮಾಡುತ್ತಿದ್ದರು . 2001-2002 ನೇ ಸಾಲಿನಲ್ಲಿ ಕೆ ಜಿ ಎಫ್ ಮೈನ್ಸ ಬಂದ್ ಆದ ಕಾರಣ ಆರೋಪಿಯು ಕೆ ಜಿ ಎಫ್ ಬಿಟ್ಟು ಬೆಂಗಳೂರಿಗೆ ಬಂದು ನೆಲೆಸಿರುತ್ತಾರೆಂದರೆ ಸರಿ . ವಿವಾದಿತ ಚೆಕ್ಕುನ ಶಾಖೆಯು ಕೆ ಜಿ ಎಫ್ ಗೆ ಸಂಬಂದಪಟ್ಟಿದ್ದು ಹಾಗೂ ಸದರಿ ಬ್ಯಾಂಕ್ ಖಾತೆಯು ಮೇಲೆ ಹೇಳಿದ ಮೈನ್ಸ ಸಂಸ್ಥೆ ಇಂದ ಆರೋಪಿಗೆ ಸಂಬಳ ನೀಡುವ ಖಾತೆಯಾಗಿರುತ್ತದೆಂದರೆ ನನಗೆ ಗೊತ್ತಿಲ್ಲ . ವಿವಾದಿತ ಚೆಕ್ಕಿನ ಖಾತೆಯು ಮೇಲೆ ಹೇಳಿದ ಮೈನ್ಸನ ಕೆಲಸದ ಸಂಬಳದ ಸಲುವಾಗಿ ದಿನಾಂಕ 12.09.1990 ರಲ್ಲಿ ಖಾತೆಯನ್ನು

This is a True Copy of the Court Records Online. Authenticated @ districts.ecourtsindia.com/cnr/KABC030919902021/truecopy/order-2.pdf

ತೆರೆಯಲಾಗಿದೆಂದರೆ ನನಗೆ ಗೊತ್ತಿಲ್ಲ . ಸದರಿ ಖಾತೆಯು ಕೇವಲ ಸಂಬಳಕ್ಕೆ ಸಂಬಂದಪಟ್ಟ ಕಾರಣ ಹಾಗೂ ಅವರಿಗೆ ಕೆಲಸ ನಿಲ್ಲಿಸಿದ ಕಾರಣ ಸದರಿ ಬ್ಯಾಂಕ್ ಖಾತೆಯನ್ನು ಆರೋಪಿಯು ಚಲಾವಣೆ ಮಾಡಲು ನಿಲ್ಲಿಸಿರುತ್ತಾರೆಂದರೆ ಸರಿಯಲ್ಲ . 30.04.2007 ರಂದು ಆರೋಪಿಯ ಬ್ಯಾಂಕ್ ಖಾತೆಗೆ ಪಿ ಎಫ್ ಮೊತ್ತ ಜಮಾವಾಗಿದ್ದು ಹಾಗೂ ದಿ ಃ15.05.2007 ರಂದು ಪಿ ಎಫ್ ಹಣ ಪಡೆದಿರುತ್ತಾರೆ ತದನಂತರ ಎಂದು ಆರೋಪಿಯು ಸದ ರಿ ಬ್ಯಾಂಕ್ ಖಾತೆಯನ್ನು ಉಪಯೋಗಿಸಿರುವುದಿಲ್ಲವೆಂದರೆ ಸರಿಯಲ್ಲ . 2007 ನೇ ಸಾಲಿನಲ್ಲಿ ಕೊನೆಯ ಬಾರಿ ಆರೋಪಿಯು ತಮ್ಮ ಖಾತೆಯನ್ನು ಉಪಯೊಋೀಗಿಸಿದ ಕಾರಣ ಬ್ಯಾಂಕಿನವರು ನಾನ್ ಪರ್ ಪಾರ್ಮಿಂಗ್ ಖಾತೆ ಎಂದು ಘೋಷಿಸಿರುತ್ತಾರೆಂದರೆ ಸರಿಯಲ್ಲ. ಈಗಲೂ ಕೂಡ ಸದರಿ ಖಾತೆ ಚಾಲ್ತಿಯಲ್ಲಿದೆಂದರೆ ಸರಿಯಲ್ಲ . ಸಿಂಡಿಕೇಟ್ ಬ್ಯಾಂಕ ಕೆನರಾ ಬ್ಯಾಂಕ್ ಒಡನೆ ಸೇರ್ಪಡೆಯಾದ ಕಾರಣ ನಾನು ಹಾಜರುಪಡಿಸಿದ ವಿವಾದಿತ ಚೆಕ್ಕನ್ನು 2007 ಕ್ಕೆ ಅಥವಾ ಅದರ ಪೂರ್ವದ ನಾನ್ ಸಿ ಟಿ ಎಸ್ ಚೆಕ್ಕು ಎಂದು ಹಿಂದಿರುಗಿರುತ್ತದೆಂದರೆ ಸರಿಯಲ್ಲ .

ದಿ ಃ 02.03.2020 ರಂದು ಆರೋಪಿಯು ತಮ್ಮ ಸಿಂಡಿಕೇಟ್ ಬ್ಯಾಂಕಿಗೆ ಸಂಬಂದಪಟ್ಟ ಚೆಕ ಪುಸ್ತಕ , ಕೆನರಾ ಬ್ಯಾಂಕಿಗೆ

This is a True Copy of the Court Records Online. Authenticated @ districts.ecourtsindia.com/cnr/KABC030919902021/truecopy/order-2.pdf

ಸಂಬಂದಪಟ್ಟ 2 ಚೆಕ್ಕುಗಳು ರೂ 200 ಹಾಗೂ 500 ಸಹಿ ಮಾಡಿ ದ ಖಾಲಿ ಚಾಪಾ ಕಾಗದವು ಕಾಣೆಯಾಗಿರುತ್ತದೆಂದು ಸಂಬಂದಪಟ್ಟ ಪೋಲೀಸ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ . ಈ ರೀತಿ ದೂರು ದಾಖಲಿಸಿರುತ್ತಾರೆಂದು ನನ್ನ ಗಮನಕ್ಕೆ ಬಂದ ಕೂಡಲೆ ನಾನು ಸುಳ್ಳಾದ ನಿಪಿ-9 ದೂರನ್ನು ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ . ವಿವಾದಿತ ಚೆಕ್ಕಿನ ಬಗ್ಗೆ ನನ್ನ ಗಂಡ ಹಾಗೂ ನನ್ನ ನಾದಿನಿ ಇಷ್ಟಿಷ್ಟು ಮೊತ್ತದ ಚೆಕ್ಕುಗಳನ್ನು ನೀಡಿದ ವಿವರಣಗಳನ್ನು ಹಾಗೂ ಸದರಿ ಚೆಕ್ಕುಗಳು ಪೋಸ್ಟಡೇಟಡ ಇರುತ್ತದೆಂದು ನಿಪಿ-9 ರಲ್ಲಿ ತೋರಿಸಿರುವುದಿಲ್ಲವೆಂದರೆ ಸರಿಯಲ್ಲ . ಕಾರಣ 1 ವರೆ ವರ್ಷವಾದ ನಂತರ ನಮ್ಮ ಮತ್ತು ರತ್ನಾ ಕರ ರೆಡ್ಡಿ ಕುಟುಂಬ ಹಾಗೂ ಆರೋಪಿಯ ಕುಟುಂಬದ ನಡುವೆ ಸಿವಿಲ ವ್ಯಾಜ್ಯ ಹೂಡಿದ್ದು ಹಾಗೂ ಆಜಗಳಗಳ ಕಾರಣಕ್ಕೆ ಆರೋಪಿ ಇಂದ ಕಳೆದುಹೋದ ಚೆಕ್ಕುಗಳನ್ನು ಪಡೆದುಕೊಂಡು ನನ್ನ ಗಂಡ ನಮ್ಮ ಅನುಸಾರ ಭರ್ತಿ ಮಾಡಿ ದುರ್ಲಾಭ ಪಡೆಯುವ ಉದ್ದೇಶದಿಂದ ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ . ವಿವಾದಿತ ಚೆಕ್ಕುಗಳನ್ನು ನಾವೇ ಕಳ್ಳತನ ಮಾಡಿಕೊಂಡಿರುತ್ತೇವೆಂದು ಆರೋಪಿಯು ಸಿಒಪಿ ಯವರಿಗೆ ದೂರು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ . ವಿವಾದಿತ ಚೆಕ್ಕಿನಲ್ಲಿ ಕಂಡು ಬರುವ ಸಹಿ ಆರೋಪಿಯದ್ದಲ್ಲ ಅದನ್ನು ನಾನು ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ .

This is a True Copy of the Court Records Online. Authenticated @ districts.ecourtsindia.com/cnr/KABC030919902021/truecopy/order-2.pdf

www.ecourtsindia.com



ನಾನು ಹೇಳಿದಹಾಗೆ ಯಾವುದೇ ರೀತಿ ವ್ಯವಹಾರ ಆಗಿರುವುದಿಲ್ಲ ಆದರೆ ಸುಳ್ಳು ಪಿರ್ಯಾದಿ ಹೂಡಿರುತ್ತೇನೆಂದರೆ ಸರಿಯಲ್ಲ. ಆರೋಪಿಯು ನೀಡಿದ ತಮ್ಮ ಹೇಳಿಕೆಯಲ್ಲಿ ನನ್ನಿಂದ ಯಾವುದೇ ಹಣ ಪಡೆದಿರುವುದಿಲ್ಲ ರತ್ನಾಕರ ರೆಡ್ಡಿ ಹಣ ಪಡೆದಿದ್ದು ಅವರ ಮೇಲೆ ಬಾಧ್ಯತೆ ಇರುತ್ತದೆಂದು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ .

ರತ್ನಾಕರ ರೆಡ್ಡಿ ಅವರು 2019 ನೇ ಸಾಲಿನ 11 ತಿಂಗಳಲ್ಲಿ ಮೃತ ಪಟ್ಟ ನಂತರ ನನ್ನ ಮತ್ತು ಆರೋಪಿ ನಡುವೆ ವೈಮನಸ್ಸು ಶುರುವಾಗಿರುತ್ತದೆಂದರೆ ಸರಿಯಲ್ಲ . ನಿಪಿ-9 ದೂರು ದಾಖಲಿಸಿದ ನಂತರ ನನ್ನ ಅನುಕೂಲದಂತೆ ತಾರೀಖನ್ನು ಬರೆದುಕೊಂಡು ವಿವಾದಿತ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ . ಒಂದು ಪಕ್ಷದಲ್ಲಿ ಆರೋಪಿಯು ನನಗೆ ವಿವಾದಿತ ಚೆಕ್ಕು ಕೊಟ್ಟಿದ್ದೆ ಆದರೆ ನಾನು ಕೆನರಾ ಬ್ಯಾಂಕಿನ ಚೆಕ್ಕನ್ನು ಪಡೆದುಕೊಳ್ಳುತ್ತಿದ್ದೆ ಹೊರತು ಸಿಂಡಿಕೇಟಿನ ಬ್ಯಾಂಕನ್ನುಪಡೆದುಕೊಳ್ಳುತ್ತಿರಲಿಲ್ಲವೆಂದರೆ ಸರಿಯಲ್ಲ . ವಿವಾದಿತ ಚೆಕ್ಕು ನಾನ್ ಸಿ ಟಿ ಎಸ ಚೆಕ್ಕು ಇದ್ದು ಅದು ಹಳೆಯ ಚೆಕ್ಕು ಇದ್ದಿರುತ್ತದೆ ಆದರು ಕೂಡ ಆರೋಪಿಯು ನನಗೆ ಸಾಲದ ಬಾಬ್ತು ವಿವಾದಿತ ಚೆಕ್ಕನ್ನು ಸಾಲ ಮರುಪಾವತಿಸಲು ಕೊಟ್ಟಿರುತ್ತಾರೆಂದು ಸುಳ್ಳು ಸಾದನೆ ಮಾಡುತ್ತಿದ್ದೇನೆಂದರೆ ಸರಿಯಲ್ಲ . ಆರೋಪಿಯ ಮೇಲೆ ಇರುವ ನಮ್ಮ ವೈಮನಸ್ಸಿನ ಸಲುವಾಗಿ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ದುರ್ಲಾಭ

This is a True Copy of the Court Records Online. Authenticated @ districts.ecourtsindia.com/cnr/KABC030919902021/truecopy/order-2.pdf

ಪಡೆಯುವ ಉದ್ದೇಶದಿಂದ ವಿವಾದಿತ ಚೆಕ್ಕು ನಾವೇ ಭರ್ತಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ವಿವಾದಿತ ಚೆಕ್ಕಿನಲ್ಲಿ ತೋರಿಸಿರುವ ಮೊತ್ತವನ್ನು ಆರೋಪಿ ಕೊಡಲು ಬಾಧ್ಯತೆ ಇಲ್ಲವೆಂದರೆ ಸರಿಯಲ್ಲ .

ಆರೊಪಿಯು ತಮ್ಮ ಬ್ಯಾಂಕ್ ಖಾತೆ ಬಂದ್ ಆಗಿರುತ್ತದೆಂದು ಗೊತ್ತಿದ್ದರೂ ಕೂಡ ಸುಮಾರು ಜನರಿಗೆ ಈ ರೀತಿ ಚೆಕ್ಕುಗಳನ್ನುಮೋಸ ಮಾಡುವ ಉದ್ದೇಶದಿಂದ ಕೊಟ್ಟಿರುತ್ತಾರೆಂದು ಪಿರ್ಯಾದಿಯಲ್ಲಿ ಹೇಳಿರುತ್ತೇನೆಂದರೆ ಸರಿಯಲ್ಲ . ಆರೋಪಿಯ ಬಗ್ಗೆ ಆಗಲೀ ಅಥವಾ ಈ ಪ್ರಕರಣದ ಬಗ್ಗೆ ಆಗಲೀ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಆದರೆ ನನ್ನ ಗಂಡನ ಮಾತುಕೇಳಿಕೊಂಡು ಈ ಸುಳ್ಳು ಪಿರ್ಯಾದಿ ಹೂಡಿ ಅದರ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ಸಾವಿತ್ರಿ ಕೋಂ ಜಯಕುಮಾರ ಗುಪ್ತ ನನ್ನ ಹಿರಿಯ ಸಹೋದರಿ . ನನ್ನ ಸೋದರಿಯಾದ ಸಾವಿತ್ರಿ ಕೂಡ ಆರೋಪಿ ವಿರುದ್ಧ ನಿರ್ದಿಷ್ಟ ಪರಿಹಾರ ಕೋರಿ ತಿಳುವಳಿಕೆ ಪತ್ರ ನೀಡಿರುತ್ತಾರೆಂದರೆ ಸರಿ . ಆರೋಪಿ ಬಳಿ ಇದ್ದ ದಾಖಲೆಗಳನ್ನು ನಾವು ಕಳುವು ಮಾಡಿ ಅದನ್ನು ನಮ್ಮ ಅನುಸಾರ ಭರ್ತಿ ಮಾಡಿಕೊಂಡು ಒಂದಲ್ಲ ಒಂದು ಪ್ರಕರಣಗಳನ್ನು ಆರೋಪಿ ವಿರುದ್ಧ ಹೂಡಿರುತ್ತಾರೆಂದರೆ ಸರಿಯಲ್ಲ . ಕೇವಲ ನಾವು ಮಾತ್ರ ಆರೋಪಿ ವಿರುದ್ಧ ಚೆಕ ಬೌನ್ಸ ಪ್ರಕರಣ ಹೂಡಿರುತ್ತೇವೆಂದರೆ

This is a True Copy of the Court Records Online. Authenticated @ districts.ecourtsindia.com/cnr/KABC030919902021/truecopy/order-2.pdf

ಸರಿಯಲ್ಲ . ಸ್ವತಃ ನಾನು ಆರೋಪಿಗೆ 10 ಲಕ್ಷ ಸಾಲ ಕೊಟ್ಟಿರುತ್ತೇನೆಂದು ಪಿರ್ಯಾದಿಯಲ್ಲಿ , ತಿಳುವವಳಿಕೆ ಪತ್ರದಲ್ಲಿ ಹಾಗೂ ಸಾಕ್ಷ್ಯದಲ್ಲಿ ಎಲ್ಲಿಯು ಹೇಳಿರುವುದಿಲ್ಲವೆಂದರೆ ಸರಿಯಲ್ಲ . ವಿವಾದಿ ಚೆಕ್ಕಿನಲ್ಲಿ ತೋರಿಸಿರುವ ಮೊತ್ತವನ್ನು ಆರೋಪಿಗೆ ಕೊಡಲು ಬಾಧ್ಯರಾಗುವುದಿಲ್ಲ ಹಾಗೂ ಕಾನೂನು ಬದ್ದವಾಗಿ ಪಡೆಯಲು ಅರ್ಹರಾಗಿರುವುದಿಲ್ಲಎಂದರೆ ಸರಿಯಲ್ಲ . ನನಗೆ ಆರೋಪಿಗೆ ಸಾಲ ಕೊಡಲು ಆರ್ಥಿಕ ಸಾಮರ್ಥ್ಯ ಇರುತ್ತದೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

22 ನೇ ಅಪರ ಮು ಮ ದಂ,
ಬೆಂಗಳೂರು ನಗರ.

This is a True Copy of the Court Records Online. Authenticated @ districts.ecourtsindia.com/cnr/KABC030919902021/truecopy/order-2.pdf

www.ecourtsindia.com